

ಸೇರಿದ್ದ ಸಾಧು, ಬ್ರಹ್ಮಚಾರಿ ವೃಂದ

ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು. ಹೀಗೆ ಅರ್ಥಪೂರ್ಣವಾಗಿ ಈ ಐತಿಹಾಸಿಕ ಮಹೋತ್ಸವವು ಸುಸಂಪನ್ನಗೊಂಡಿತು.

ದೇಶಾದ್ಯಂತ ಇನ್ನೂರಕ್ಕೂ ಹೆಚ್ಚು ಸಾಧು, ಬ್ರಹ್ಮಚಾರಿಗಳು ಈ ಆಧ್ಯಾತ್ಮಿಕ ಸಮ್ಮಿಲನಕ್ಕೆ ಆಗಮಿಸಿದ್ದರು. ಹಲವಾರು ಕಡೆಗಳಿಂದ ಬಂದಿದ್ದ ಮತ್ತು ಸ್ಥಳೀಯ ಮೈಸೂರಿನ ಸಾವಿರಾರು ಭಕ್ತರಿಗೆ ಈ ಎಲ್ಲ ಮಹಾತ್ಮರ ಸತ್ಸಂಗದ ಅಪೂರ್ವ ಅವಕಾಶ ದೊರೆಯಿತು. ಇದರಿಂದ ಅವರೆಲ್ಲ ಆಧ್ಯಾತ್ಮಿಕ ಆನಂದದ ಪವಿತ್ರಭಾವದಿಂದ ಕೂಡಿದ್ದರು. ಅಚ್ಚುಕಟ್ಟಾದ ಊಟ ವಸತಿಗಳ ವ್ಯವಸ್ಥೆಯನ್ನು ಮಾಡಲಾಗಿತ್ತು. ರಾಮಕೃಷ್ಣ–ವಿವೇಕಾನಂದ–ವೇದಾಂತ ಭಾವ ಧಾರೆಯ ಪುಸ್ತಕಗಳ ಮಾರಾಟ ವ್ಯವಸ್ಥೆಯೂ ಇತ್ತು. ಹಾಗೆಯೇ 'ವಿವೇಕಪ್ರಭ' ಪತ್ರಿಕೆಗೆ ೩೮೭ ಚಂದಾದಾರರು ಸೇರ್ಪಡೆ ಯಾದರು. ಕರ್ನಾಟಕ ಮತ್ತು ಇತರೆಡೆಗಳಿಂದ ಬಂದಿದ್ದ ಸಾಧುಗಳು, ಬ್ರಹ್ಮಚಾರಿಗಳು ಇದಕ್ಕಾಗಿ ಹಗಲಿರುಳೂ ದುಡಿದಿದ್ದಾರೆ. ಹಾಗೆಯೇ ವಿದ್ಯಾಶಾಲೆ ಮತ್ತು ರಾಮಕೃಷ್ಣ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸಿಬ್ಬಂದಿ ಬಹಳಷ್ಟು ಶ್ರಮಿಸಿದ್ದಾರೆ. ಹಲವಾರು ಕಡೆ ಗಳಿಂದ ಬಂದಿದ್ದ ಸ್ವಯಂಸೇವಕರು ಪರಿಶ್ರಮ ವಹಿಸಿದ್ದಾರೆ. ಎಲ್ಲಕ್ಕೂ ಹೆಚ್ಚಾಗಿ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮುಂತಾದ ಹಿರಿಯ ಸಂನ್ಯಾಸಿಗಳು ಸಮರ್ಪಕ ಮಾರ್ಗದರ್ಶನ ನೀಡಿದ್ದಾರೆ. ಭಾರತೀಯ ಆಧ್ಯಾತ್ಮಿಕ ಸಮ್ಮಿಲನದ ಅಭೂತಪೂರ್ವ ಯಶಸ್ಸಿಗೆ ಇವೆಲ್ಲವೂ ಸೇರಿಯೇ ಕಾರಣವಾಗಿತ್ತು.

ಹಿಂದೂ ಸಮಾಜದ ಆಂತರಿಕ ಚೈತನ್ಯವನ್ನು ಎಲ್ಲ ರೀತಿ ಯಿಂದಲೂ ಬಡಿದೆಬ್ಬಿಸುವ ಅಪೂರ್ವ ಸಮಾವೇಶ ಇದಾಗಿತ್ತು. ಖ್ಯಾತ ಸಾಹಿತಿಗಳಾದ ಡಾ. ಸಿ.ಪಿ. ಕೃಷ್ಣಕುಮಾರ್ ಅವರ ಕೆಳಗಿನ ಶುಭನುಡಿಗಳು ಆಧ್ಯಾತ್ಮಿಕ ಸಮ್ಮಿಲನದ ಧ್ಯೇಯೋದ್ದೇಶವನ್ನು ಸುಂದರವಾಗಿ ಹೀಗೆ ಬಿಂಬಿಸುತ್ತವೆ: "ಇಂದು ಸನಾತನ ಧರ್ಮ ಒಂದು ಸಂದಿಗ್ಧ ಸ್ಥಿತಿಯಲ್ಲಿದೆ. ಒಳಗಿನ ದೌರ್ಬಲ್ಯಗಳಿಗೆಂತೊ ಅಂತೆಯೇ ಹೊರಗಿನ ಆಕ್ರಮಣಗಳಿಗೂ ತುತ್ತಾಗಿದೆ. ಪಶ್ಚಿಮದ ಭೌತವಾದ, ಭೋಗ ನಾಗರಿಕತೆ, ವಿಜ್ಞಾನ ತಂತ್ರಜ್ಞಾನಗಳ ವಿಪ ರೀತ ಪ್ರಗತಿ ಮುಂತಾದವು ಸನಾತನಧರ್ಮಕ್ಕೆ ಗಂಭೀರ ಸವಾಲು ಗಳನ್ನೊಡ್ಡಿವೆ. ಅದು ಅವುಗಳನ್ನೆದುರಿಸಿ ಗೆದ್ದು ಬದುಕಬಲ್ಲುದೆ, ಬದುಕುವುದಾದರೂ ಹೇಗೆ ಎಂಬುದನ್ನು ಕುರಿತು ಆರೋಗ್ಯಪೂರ್ಣ ವಾದ ಚರ್ಚೆ ಜಿಜ್ಞಾಸೆಗಳಿಗೆ ಇದು ಸಕಾಲವಾಗಿದೆ. ಈ ಪ್ರಶ್ನೆಗಳಿಗೆ, ಸವಾಲುಗಳಿಗೆ ಈ **'ಆಧ್ಯಾತ್ಮಿಕ ಸಮ್ಮಿಲನ'** ಸಮರ್ಥ ಉತ್ತರವಿತ್ತಿದೆ. ಸನಾತನಧರ್ಮದ **ಪರಿಷ್ಕರಣ, ಪುನರುತ್ಥಾನ, ಆಧುನೀಕರಣ,** ಅಂತೆಯೇ **ಏಕೀಕರಣ** ಇಂದಿನ ತುರ್ತು ಅಗತ್ಯಗಳಾಗಿವೆ. ಈ ದಿಶೆಯಲ್ಲಿ 'ಸಮ್ಮಿಲನ' ಯಾವ ಜ್ಯೋತಿರ್ಮಯ ಮಾರ್ಗದರ್ಶನ ವನ್ನು ನೀಡಬೇಕಿತ್ತೊ, ಅದನ್ನು ಎಲ್ಲ ರೀತಿಯಿಂದಲೂ ನೀಡಿದೆ. ಇದು ಸ್ವಾಮಿ ವಿವೇಕಾನಂದರ ಉಪಾದೇಯ ಉಕ್ತಿ: "ಭಾರತವು ಸತ್ತುಹೋಗಲಿ ಎನ್ನಲಾಗುತ್ತದೆಯೆ? ಹಾಗಾದಲ್ಲಿ ಜಗತ್ತಿನಿಂದ ಎಲ್ಲ ಆಧ್ಯಾತ್ಮಿಕತೆಯೂ ಸತ್ತು ಹೋಗುತ್ತದೆ; ಎಲ್ಲ ನೈತಿಕ ಪರಿ ಪೂರ್ಣತೆಯೂ ನಾಶವಾಗಿ ಹೋಗುತ್ತದೆ." ಇದೂ ಸ್ವಾಮೀಜಿ ಯವರದೇ ಪ್ರವಾದಿ ವಾಣಿ, "ಕಾಲಕ್ರಮದಲ್ಲಿ ಮೈಸೂರು ನಮ್ಮ ಪ್ರಮುಖ ಕೇಂದ್ರವಾಗುವುದು..." ಈ ಭವಿಷ್ಯವಾಣಿಯನ್ನು ಸಾರ್ಥಕಗೊಳಿಸಿದೆ, **'ಭಾರತೀಯ ಆಧ್ಯಾತ್ಮಿಕ ಸಮ್ಮಿಲನ'**. ✪

ಶ್ರೀರಾಮಕೃಷ್ಣ ಶಿಷ್ಯೋದ್ಯಾನ : ಪುಷ್ಪ ೧೫

# ಸ್ವಾಮಿ ವಿಜ್ಞಾನಾನಂದ

ಡಾ. ಕೆ. ಅನಂತರಾಮು



**ಸ್ವಾ**ಮಿ ವಿಜ್ಞಾನಾನಂದರು ತಮ್ಮ ತಂದೆತಾಯಿಗಳ ಆರು ಮಕ್ಕಳ ಪೈಕಿ ಎಲ್ಲರಿಗಿಂತ ಹಿರಿಯರಾಗಿದ್ದರು. ಆದರೆ ಶ್ರೀರಾಮಕೃಷ್ಣ ಪರಮಹಂಸರ ಕರಕಮಲಸಂಜಾತರಾಗಿ ಎಲ್ಲರಿಗಿಂತ ಕಿರಿಯರಾದರು. ಅವರು ಪರಮ ಹಂಸರ ಹೂದೋಟದ ಕನಕಾಂಬರದಂತಹ ಕಿರಿಯ ಕುಸುಮವಾದರು. ಆ ಸದ್ಗುರುವು ಕೈಯಾರೆ ಮೇಲೆತ್ತಿ ಮುಡಿದ ಕೊನೆಯ ಕುಸುಮವಾದರು. ಸದ್ಗುರುನಾಥನೊಡನೆ ಗುದ್ದಾಡಿ ಅವರ ಬಳಿ ಇದ್ದುಬಿದ್ದುದನ್ನೆಲ್ಲ ಅಪಹರಿಸಿದ ಜಗಜಟ್ಟಿಯಾದರು. ಆಧುನಿಕವಿದ್ಯೆಯ ಉತ್ತುಂಗ ಶಿಖರ ವನ್ನೇರಿದರೂ ಅಧ್ಯಾತ್ಮವಿದ್ಯೆಯ ಶಿಖರವು ಅದಕ್ಕಿಂತಲೂ ಉತ್ತುಂಗ ವಾದುದೆಂಬುದನ್ನು ತೋರಿಸಿಕೊಟ್ಟ ಮಹಾನುಭಾವಿಗಳಾದರು. ಪರಮಹಂಸರು ಬೆಳಗಿಸಿದ ತ್ಯಾಗಜ್ಯೋತಿಯನ್ನು ನಂದದ ಹಾಗೆ ಕಾಪಾಡುತ್ತ, ಅದನ್ನು ಮುಂದಿನ ಪರಮಹಂಸಪೀಳಿಗೆಯ ಕೈಗಿತ್ತ ಅಂತಿಮ ದೀಪಧಾರಿಯಾದರು. "ಶ್ರೀರಾಮಕೃಷ್ಣರು ನಿನ್ನಲ್ಲಿ ಚೆನ್ನಾಗಿ ಮನೆ ಮಾಡಿಕೊಂಡಿರುವುದನ್ನು ನಾನು ಸ್ಪಷ್ಟವಾಗಿ ಕಾಣುತ್ತಿದ್ದೇನೆ" ಎಂದು ವಿವೇಕಾನಂದರು ಹೇಳಿದ್ದು ಅವರ ವ್ಯಕ್ತಿತ್ವಕ್ಕಿಟ್ಟ ಕಿರೀಟವಾಯಿತು.

**ಕಪಿಗಳೆಂದರೆ ಆಂಜನೇಯಸ್ವಾಮಿಗಳು:** ಸ್ವಾಮಿ ವಿಜ್ಞಾನಾನಂದರ ತಂದೆ ತಾರಕನಾಥ ಚಟ್ಟೋಪಾಧ್ಯಾಯರು ಅಂದಿನ ಆಂಗ್ಲ ಸರ್ಕಾರದಲ್ಲಿ ಉನ್ನತ ಪದವಿಯಲ್ಲಿದ್ದರು. ಅವರಿಗೆ ಊರಿಂದ ಊರಿಗೆ ವರ್ಗವಾಗುತ್ತಿತ್ತು. ವಿಜ್ಞಾನಾನಂದರು ಉತ್ತರಪ್ರದೇಶದ ಎಟಾವ ಎಂಬ ನಗರದಲ್ಲಿ ಜನಿಸಿದರು. ಅದು ೧೮೬೮ರ ಅಕ್ಟೋಬರ್ ೨೦ರ ವೈಕುಂಠ ಚತುರ್ದಶಿಯ ಪುಣ್ಯದಿನವಾಗಿತ್ತು. ಹರಿಪ್ರಸನ್ನ ಚಟ್ಟೋಪಾಧ್ಯಾಯ ಎಂಬುದು ಅವರ ಜನ್ಮನಾಮ. ಆಮೇಲೆ ಆ ಕುಟುಂಬವು ವಾರಾಣಸಿಗೆ ವರ್ಗಾವಣೆಗೊಂಡು, ವಿಜ್ಞಾನಾನಂದರ ಪ್ರಾಥಮಿಕ ವಿದ್ಯಾಭ್ಯಾಸ ಅಲ್ಲಿಯೇ ನಡೆಯಿತು. ತರುವಾಯ ಆ ಕುಟುಂಬವು ಕೊಲ್ಕೊತ್ತೆಯ ದಕ್ಷಿಣೇಶ್ವರಕ್ಕೆ ಸಮೀಪದ ಬೆಲ್ಗರಿಯಾ ಎಂಬಲ್ಲಿಗೆ ಸ್ಥಳಾಂತರಗೊಂಡುದರಿಂದ ವಿಜ್ಞಾನಾನಂದರ ಮುಂದಿನ ವಿದ್ಯಾಭ್ಯಾಸ ಕೊಲ್ಕತ್ತೆಯಲ್ಲೇ ನಡೆಯಿತು.

ಒಂದುದಿನ ಅವರ ಮನೆಯ ಸಮೀಪದ ಬಿದಿರುಮೆಳೆಯೊಂದರಿಂದ ಯಾರೋ ಗುಂಡುಹೊಡೆದ ಸದ್ದು ಕೇಳಿಸಿತು. ಬಾಲಕ ವಿಜ್ಞಾನಾನಂದರು ಹೋಗಿ ನೋಡಿದಾಗ ಕಪಿಯೊಂದು ಗುಂಡೇಟಿಗೆ ಬಲಿಯಾಗಿ ನೆಲದ ಮೇಲೆ ಬಿದ್ದಿತ್ತು. ಅದು ಎರಡು ಬಾರಿ ರಾಮನಾಮವನ್ನು ಉಚ್ಚರಿಸುತ್ತ ಕೈಮುಗಿದುಕೊಂಡು ಪ್ರಾಣಬಿಟ್ಟಿತು. ಅದನ್ನು ಕಂಡ ವಿಜ್ಞಾನಾನಂದರಿಗೆ ಕಪಿಗಳೆಂದರೆ ಆಂಜನೇಯಸ್ವಾಮಿಗಳು; ಅವು ಶ್ರೀರಾಮಭಕ್ತ ಮಂಡಳಿಗೆ ಸೇರಿದಂಥವು ಎಂಬ ನಂಬಿಕೆಯುಂಟಾಯಿತು. ಆ ಕರುಣಾಪೂರ್ಣ ಘಟನೆ ಕೂಡ ಅವರ ಮನಸ್ಸಿನಲ್ಲಿ ನಾಟಿ ಕುಳಿತುಕೊಂಡಿತು.

ವಿಜ್ಞಾನಾನಂದರು ೧೪ ವರ್ಷದ ಬಾಲಕರಾಗಿದ್ದಾಗ ತಾಯಿ ನಕುಲೇಶ್ವರಿ ಯಾವುದೋ ಆತುರದಲ್ಲಿ ಮಗನನ್ನು, 'ನೀನು ಸುಳ್ಳುಗಾರ' ಎಂದುಬಿಟ್ಟಳು. ಆಗ ವಿಜ್ಞಾನಾನಂದರು ತಾವು ಸುಳ್ಳುಗಾರರಲ್ಲ ಎಂಬುದನ್ನು ಒಳ್ಳೆಯ ಮಾತಿನಲ್ಲೇ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರಾದರೂ "ನಾನು ಒಪ್ಪುವುದಿಲ್ಲ ಬಿಡು, ನೀನು ಸುಳ್ಳುಗಾರ" ಎಂದೇ ದುಡುಕಿ ಪುನಃ ಹೇಳಿಬಿಟ್ಟಳು. ಆಗಂತೂ ವಿಜ್ಞಾನಾನಂದರು ಕೋಪದಿಂದ ಕಿಡಿಕಿಡಿಯಾಗಿಬಿಟ್ಟರು. ಬ್ರಹ್ಮಚಾರಿಯ ಕೋಪವನ್ನು ಕೇಳಬೇಕೇ. "ಸುಳ್ಳು ಹೇಳಿದ್ದರೆ ನಾನು ಬ್ರಾಹ್ಮಣನೇ ಅಲ್ಲ" ಎನ್ನುತ್ತ ತಮ್ಮ ಜನಿವಾರವನ್ನೇ ಕಿತ್ತೆಸೆದುಬಿಟ್ಟರು. ಆಗ ನಕುಲೇಶ್ವರಿಯು ಮುಂದೇನು ಕಾದಿದೆಯೋ ಎಂದು ಭಯಗ್ರಸ್ತಳಾಗಿಬಿಟ್ಟಳು. ಆ ಹೊತ್ತಿನಲ್ಲಿ ತಾರಕನಾಥರು ಆಫ್ಘಾನಿಸ್ಥಾನದ ಕ್ವೆಟ್ಟಾ ಎಂಬಲ್ಲಿದ್ದರು. ಕಾಕತಾಳೀಯವೋ ಎಂಬಂತೆ ಈ ಘಟನೆಯಾದ ಮರುದಿನವೇ ಅವರು ಮೃತರಾದರೆಂಬ ತಂತಿವರ್ತಮಾನ ಬಂದು ಎಲ್ಲರೂ ಶೋಕಸಾಗರದಲ್ಲಿ ಮುಳುಗಿದರು.

**ಹುಚ್ಚನೆಂದು ನಿಂದಿಸಬೇಡಿ:** ವಿಜ್ಞಾನಾನಂದರು ತಮ್ಮ ಎಳವೆಯಲ್ಲೊಮ್ಮೆ ಪರಮಹಂಸರನ್ನು ನೋಡಿದ್ದರಾದರೂ ಮುಂದೆ ಆಧ್ಯಾತ್ಮಿಕ ಸೆಳೆತ ಹೆಚ್ಚಾದಾಗ ೧೮೮೩ ರಿಂದ ಮುಂದಕ್ಕೆ ಹಲವು ಬಾರಿ ಅವರ ದರ್ಶನ ಪಡೆದುಕೊಂಡರು. ಒಮ್ಮೆ ಅವರು ಒಂದು ರಾತ್ರಿಯನ್ನು ದಕ್ಷಿಣೇಶ್ವರದಲ್ಲಿಯೇ ಕಳೆಯಬೇಕೆಂದು ಇಷ್ಟಪಟ್ಟರು. ಪರಮಹಂಸರಾದರೋ ಆ ವಿಚಾರವನ್ನು ಪ್ರೀತಿಯಿಂದ

ಒಪ್ಪಿಕೊಂಡು, ಅವರಿಗೆ ಅಂದಿನ ರಾತ್ರಿಯ ಊಟದ ವ್ಯವಸ್ಥೆ ಮಾಡಿದರು. ತಮ್ಮ ಕೊಠಡಿಯಲ್ಲಿಯೇ ಅವರಿಗೆ ಹಾಸಿಕೊಟ್ಟು ಸೊಳ್ಳೆಪರದೆ ಕಟ್ಟಿಕೊಟ್ಟರು. "ನೀವೆಲ್ಲ ನನ್ನವರು, ನಿಮ್ಮನ್ನು ತುಂಬಾ ಪ್ರೀತಿಸುತ್ತೇನೆ. ಹಾಗೆ ಪ್ರೀತಿಸಬೇಕೆಂದು ಜಗನ್ಮಾತೆಯೇ ಆಜ್ಞೆ ಮಾಡಿದ್ದಾಳೆ" ಎಂದು ಹೇಳಿದರು. ವಿಜ್ಞಾನಾನಂದರು ಮಲಗಿದ ಮೇಲೆ ಪರಮಹಂಸರು ಚಪ್ಪಾಳೆ ತಟ್ಟುತ್ತಾ, 'ತಾಯಿ ತಾಯಿ' ಎಂದು ಹೇಳುತ್ತ, ಹಾಸುಗೆಯ ಸುತ್ತ ಆನಂದದಿಂದ ಕುಣಿದಾಡಿದರು. ಅದರ ಫಲವಾಗಿ ವಿಜ್ಞಾನಾನಂದರಿಗೆ ಆಧ್ಯಾತ್ಮಿಕ ತೇಜಸ್ಸು ಮೈಗೂಡಿತು.

ವಿಜ್ಞಾನಾನಂದರು ಪದೇಪದೇ ಪರಮಹಂಸರ ಸನ್ನಿಧಿಗೆ ಹೋಗುತ್ತಿರುವುದನ್ನು ತಿಳಿದ ತಾಯಿ ನಕುಲೇಶ್ವರಿಯು, "ಅಲ್ಲಿಗೆ ಹೋಗಬೇಡಪ್ಪಾ, ಅವನೊಬ್ಬ ಹುಚ್ಚುಬ್ರಾಹ್ಮಣ, ಹುಡುಗರ ತಲೆಕೆಡಿಸುತ್ತಿದ್ದಾನೆ" ಎಂದಳು. ತಂಗಿಯೂ ನಡುವೆ ಬಾಯಿ ಹಾಕಿ "ಹೋಗಬೇಡಣ್ಣ, ಆ ಹುಚ್ಚುಬ್ರಾಹ್ಮಣನು ಈಗಾಗಲೇ ಇನ್ನೂರು ಯುವಕರ ತಲೆಕೆಡಿಸಿಬಿಟ್ಟಿದ್ದಾನೆ" ಎಂದು ಆಕ್ಷೇಪಿಸಿದಳು. ಆಗ ವಿಜ್ಞಾನಾನಂದರು "ಮಹಾತ್ಮರನ್ನು ಹುಚ್ಚ ಎಂದು ಕರೆದು ಪಾಪಕ್ಕೆ ಗುರಿಯಾಗಬಾರದಮ್ಮಾ, ಅವರ ಸಂಗದಲ್ಲಿದ್ದರೆ, ಅವರ ಮಾತು ಕೇಳುತ್ತಿದ್ದರೆ, ಅಮೃತವನ್ನು ಕುಡಿದಂತಾಗುತ್ತದೆ. ಅವರ ಪ್ರೇಮಪ್ರವಾಹದಲ್ಲಿ ನಾನು ಕೊಚ್ಚಿ ಹೋಗುತ್ತಿದ್ದೇನೆ" ಎಂದು ತಮ್ಮ ಹೃದಯಬಿಚ್ಚಿ ಹೇಳಿದರು. ಆಗ ಅವರುಗಳು "ಓ ಸರಿಬಿಡು, ಈಗಾಗಲೇ ಅವನು ನಿನ್ನ ತಲೆಯನ್ನು ಕೆಡಿಸಿಬಿಟ್ಟಿದ್ದಾನೆ" ಎಂದು ತೀರ್ಮಾನದ ಮಾತನ್ನು ಹೇಳಿಬಿಟ್ಟರು.

ಮತ್ತೊಂದು ಸಲ ವಿಜ್ಞಾನಾನಂದರು ಪರಮಹಂಸರನ್ನು ಕಂಡಾಗ, "ಧ್ಯಾನಮಾಡಲು ಕುಳಿತರೆ ಮನಸ್ಸು ಚಂಚಲವಾಗುತ್ತದೆ" ಎಂದು ಹೇಳಿಕೊಂಡರು. ಒಡನೆಯೇ ಪರಮಹಂಸರು ಅವರ ನಾಲಗೆಯನ್ನು ಹೊರಕ್ಕೆಳೆದು ಅದರ ಮೇಲೆ ಬೀಜಾಕ್ಷರಗಳನ್ನು ಬರೆದರು. "ಈಗ ಪಂಚವಟಿಗೆ ಹೋಗಿ ಧ್ಯಾನಮಗ್ನನಾಗು" ಎಂದರು. ವಿಜ್ಞಾನಾನಂದರು ತೂರಾಡುತ್ತಲೇ ಅಲ್ಲಿಗೆ ಹೋಗಿ ಧ್ಯಾನಕ್ಕೆ ಕುಳಿತರು. ಆಗ ಅಪೂರ್ವವಾದ ಏಕಾಗ್ರತೆ ಸಿದ್ಧಿಸಿತು. ಸುತ್ತಲಿನ ಜಗತ್ತೆಲ್ಲವೂ ಮಾಯವಾಗಿ ಮನಸ್ಸು ಆನಂದಾಮೃತದಲ್ಲಿ ಕರಗಿಹೋಯಿತು. ಆಮೇಲೆ ಪರಮಹಂಸರು, "ಜೋಪಾನವಾಗಿರು ಮಗುವೆ, ಹೆಣ್ಣುಹೊನ್ನುಗಳ ಬಲೆಗೆ ಬೀಳಬೇಡ. ಜಗನ್ಮಾತೆಯ ವಿಶೇಷಕೃಪೆಗೆ ಪಾತ್ರನಾಗಿರುವ ನಿನ್ನಿಂದ ಅವಳು ಬೇಕಾದಷ್ಟು ಕೆಲಸಗಳನ್ನು ಮಾಡಿಸುವವಳಿದ್ದಾಳೆ. ಸಂಸಾರದ ಬಲೆಗೆ ಬಿದ್ದವರು ಕಾಗೆ ಕುಕ್ಕಿದ ಹಣ್ಣಿನಂತಾಗಿಬಿಡುತ್ತಾರೆ. ಆಮೇಲೆ ಆ ಹಣ್ಣು ದೇವರ ನೈವೇದ್ಯಕ್ಕಾಗುವುದಿಲ್ಲ" ಎಂದು ಉಪದೇಶಿಸಿ ಬೀಳ್ಕೊಟ್ಟರು.

**ಗುರುವಿನೊಡನೆ ಗುದ್ದಾಟ:** ಇನ್ನೊಂದು ದಿನ ಪರಮಹಂಸರು ಇದ್ದಕ್ಕಿದ್ದಂತೆ, "ನಿನಗೆ ಕುಸ್ತಿಯಾಡಲು ಬರುತ್ತದೆಯಾದರೆ ನನ್ನೊಡನೆ ಸೆಣಸು ಬಾ" ಎಂದು ಆಹ್ವಾನಿಸಿದರು. ಸೆಣಸಾಟದಲ್ಲಿ ಪರಮಹಂಸರು ಸೋತುಹೋದರು. ಹಾಗೆ ಸೋತು ಆ ಜಗನ್ಮಾತೆಯ ಪುತ್ರನನ್ನು ತಮ್ಮವನನ್ನಾಗಿ ಮಾಡಿಕೊಂಡರು. ವಿಜ್ಞಾನಾನಂದರು ಗೆದ್ದು ಪರಮಹಂಸರ ಆಧ್ಯಾತ್ಮಿಕಶಕ್ತಿಗೆ ಸೋತು ಶರಣಾದರು. ಆಗ ಅವರಿಗೆ ತಮ್ಮ ದೇಹದಲ್ಲಿ ಯಾವುದೋ ಕೋಲ್ಮಿಂಚಿನ ಸಂಚಾರವಾದಂತಾಗಿ ಭಾವಾವಿಷ್ಟರಾಗಿ ಬಿಟ್ಟರು. 'ಶಕ್ತಿಪಾತ'ದ ಮೂಲಕ ಪರಮಹಂಸರು ತಮ್ಮಲ್ಲಿದ್ದ ತಪೋಬಲವನ್ನೆಲ್ಲ ಅವರಿಗೆ ಧಾರೆಯೆರೆದುಬಿಟ್ಟರು. ಆಗಾಗ ಕೆಲವು ಭಕ್ತರು ಪರಮಹಂಸರನ್ನು ಕುರಿತು, "ಹೀಗೆ ಯುವಕರೆಲ್ಲ ನಿಮ್ಮ ಬಳಿಗೆ ಬಂದು ಸಂನ್ಯಾಸಿಗಳಾಗಿಬಿಡುತ್ತಿದ್ದಾರಲ್ಲಾ, ಇದು ಒಳ್ಳೆಯದೇನು ಮಹಾರಾಜ್" ಎಂದು ಪ್ರಶ್ನಿಸುತ್ತಿದ್ದರು. ಅದಕ್ಕೆ ಪರಮಹಂಸರು, "ನೀವು ಅವರ ಹೊರಗನ್ನು ಮಾತ್ರ ನೋಡುತ್ತೀರಿ, ನಾನು ಅವರ ಒಳಗನ್ನು ನೋಡುತ್ತೇನೆ. ಅವರು ಸಂಸಾರದಲ್ಲಿ ಬಿದ್ದು ಸಾಯಲು ಬಂದವರಲ್ಲ. ಲೋಕಕ್ಕೆ ಬೆಳಕು ನೀಡಲು ಬಂದಿದ್ದಾರೆ. ಈಗಾಗಲೇ ಅವರು ಕಾಮಿನಿ ಕಾಂಚನಗಳನ್ನು ಗೆದ್ದಿದ್ದಾರೆ, ಅವರು ಹೋಮಾಪಕ್ಷಿಯ ಹಾಗೆ" ಎಂದು ಎದೆತಟ್ಟಿ ಹೇಳುತ್ತಿದ್ದರು.

ಹೋಮಾ ಎಂಬುದು ವೈದಿಕಸಾಹಿತ್ಯದಲ್ಲಿ ಬರುವ ಒಂದು ಕವಿಕಲ್ಪನೆಯ ಪಕ್ಷಿ. ಅದು ಅಂತರಿಕ್ಷದಲ್ಲಿ ಗೂಡುಕಟ್ಟಿ ಮೊಟ್ಟೆಯಿಡುತ್ತದೆ. ಆ ಮೊಟ್ಟೆಯಾದರೋ ಗೂಡಿನಿಂದ ಜಾರಿಕೊಂಡು ಭೂಮಿಯತ್ತ ಬೀಳುತ್ತದೆ. ಹಾಗೆ ಬೀಳುತ್ತಲೇ ಒಡೆದುಕೊಂಡು ಅದರಿಂದ ಮರಿ ಹೊರಕ್ಕೆ ಬರುತ್ತದೆ. ಹಾಗೆ ಬಂದ ಮೇಲೂ ಭೂಮಿಯತ್ತ ಬೀಳುತ್ತಲೇ ಇರುತ್ತದೆ. ಹಾಗೆ ಬೀಳುತ್ತಲೇ ಅದು ಕಣ್ಣುಬಿಡುತ್ತದೆ, ಅದರ ರೆಕ್ಕೆಗಳು ಬಲಿಯುತ್ತವೆ. ಆಗಲೂ ಬೀಳುತ್ತಲೇ ಇರುತ್ತದೆ. ಇನ್ನೇನು ಭೂಮಿಗೆ ಬಿದ್ದು ಚೂರುಚೂರಾಗಿಬಿಡುತ್ತೇನೆ ಎಂದೆನಿಸಿದಾಗ 'ಸೊಂಯ್' ಎಂದು ಅಂತರಿಕ್ಷದತ್ತ ಹಾರಿ ತನ್ನ ತಾಯಿಯನ್ನು ಸೇರಿಕೊಂಡು ಬಿಡುತ್ತದೆ. ಪರಮಹಂಸರ ಶಿಷ್ಯರೆಂದರೆ ಹಾಗೆ, ಲೋಕಕ್ಕೆ ಬಂದರೂ ಲೋಕದ ಕೊಳೆಯನ್ನು ಅಂಟಿಸಿಕೊಳ್ಳದೆ, ತಾವು ಹೊರಟುಬಂದಿದ್ದ ದಿವ್ಯಧಾಮವನ್ನೇ ಸೇರಿಕೊಳ್ಳುವ ಹೋಮಾಪಕ್ಷಿಗಳು!

**ಸಿವಿಲ್ ಇಂಜಿನಿಯರ್ ಮಹಾಶಿಲ್ಪಿ:** ವಿಜ್ಞಾನಾನಂದರು ಹೆಚ್ಚುಕಾಲ ಸದ್ಗುರುವಿನ ಸನ್ನಿಧಾನದಲ್ಲಿರುವುದು ಸಾಧ್ಯವಾಗಲಿಲ್ಲ. ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಬಿಹಾರದ ಬಂಕಿಪುರ, ಮಹಾರಾಷ್ಟ್ರದ ಪೂನಾಗಳಲ್ಲಿ ಹಲವು ವರ್ಷಗಳನ್ನು ಅವರು ಕಳೆಯಬೇಕಾಯಿತು. ಆ ಅವಧಿಯಲ್ಲಿಯೇ ಪರಮಹಂಸರು ಮಹಾಸಮಾಧಿಯಲ್ಲಿ ಲೀನವಾಗಿಬಿಟ್ಟರು. ಪೂನಾದಲ್ಲಿ ೧೮೯೨ರಲ್ಲಿ ಅವರು ಸಿವಿಲ್ ಇಂಜಿನಿಯರ್ ಪದವಿಯನ್ನು ಗಳಿಸಿದರು. ತಂದೆ ತೀರಿಹೋಗಿದ್ದುದರಿಂದಲೂ ಹಾಗೂ ತಾವು ಮನೆಯ ಹಿರಿಯ ಮಗನಾಗಿದ್ದುದರಿಂದಲೂ ವಿಜ್ಞಾನಾನಂದರು ಸರ್ಕಾರದ ಉದ್ಯೋಗವನ್ನು ಸ್ವೀಕರಿಸಿ, ಕೆಲವು ವರ್ಷಗಳು

ದುಡಿದು, ಕುಟುಂಬದ ನಿರ್ವಹಣೆಗೆ ಸೂಕ್ತವಾದ ವ್ಯವಸ್ಥೆ ಮಾಡಿದರು. ಆ ಕಾಲದಲ್ಲಿಯೂ ಅವರ ಆಧ್ಯಾತ್ಮಿಕ ಹಸಿವು ಜಾಗೃತವಾಗಿಯೇ ಇತ್ತು. ಗಾಜೀಪುರದ ಪವಾಹಾರಿಬಾಬಾ ಮತ್ತು ವಾರಾಣಸಿಯ ತ್ರೈಲಂಗಸ್ವಾಮಿ ಮೊದಲಾದ ಮಹಾತ್ಮರನ್ನು ಸಂದರ್ಶಿಸಿ ಪುನೀತರಾದರು. ಈ ನಡುವೆ ಅವರ ಚಿಕ್ಕಪ್ಪ, "ಮದುವೆಮಾಡಿಕೋ ಪ್ರಸನ್ನ, ಇದು ಸೂಕ್ತವಾದ ಸಮಯವಲ್ಲವೆ" ಎಂದು ಒತ್ತಾಯಿಸ ತೊಡಗಿದರು. ಅದರಿಂದ ಜುಗುಪ್ಸೆಗೊಂಡು ವಿಜ್ಞಾನಾನಂದರು ಉದ್ಯೋಗವನ್ನು ತೊರೆದು ೧೮೯೭ರಲ್ಲಿ ಕೊಲ್ಕೊತ್ತೆಯ ಆಲಂಬಜಾರ್‌ನ ರಾಮಕೃಷ್ಣಮಠಕ್ಕೆ ಬಂದು ಸೇರಿಬಿಟ್ಟರು. ಅಲ್ಲಿ ವಿವೇಕಾನಂದರ ಸಂಗವಾಗಿ ಮುಂದೆ ಮಾಡಬೇಕಾದ ಕಾರ್ಯಗಳ ಸ್ವರೂಪವನ್ನೆಲ್ಲ ಅವರಿಂದ ಅರಿತುಕೊಂಡರು. ಪ್ರಸನ್ನ ಎಂಬ ಅವರ ಹುಟ್ಟುಹೆಸರನ್ನು ಪ್ರೀತಿಯಿಂದ ಪರಿವರ್ತಿಸಿ ವಿವೇಕಾನಂದರು 'ಪೇಶಾನ್' ಎಂದು ಕರೆಯುತ್ತಿದ್ದರು. ಅವರ ಮಾರ್ಗದರ್ಶನದಲ್ಲಿಯೇ ೧೮೯೯ರಲ್ಲಿ ವಿಧ್ಯುಕ್ತವಾಗಿ ಸಂನ್ಯಾಸಾಶ್ರಮವನ್ನು ಪ್ರವೇಶಿಸಿ, ವಿಜ್ಞಾನಾನಂದರೆಂದು ಪ್ರಸಿದ್ಧರಾದರು. ೧೯೦೦ರಲ್ಲಿ ಅವರು ಪ್ರಸಿದ್ಧ ಪುಣ್ಯಕ್ಷೇತ್ರವಾದ, ಅಲಹಾಬಾದ್ ಎಂದೂ ಕರೆಯಲಾಗುವ ಪ್ರಯಾಗಕ್ಷೇತ್ರದಲ್ಲಿ ರಾಮಕೃಷ್ಣಮಠವೊಂದನ್ನು ಪ್ರಾರಂಭಿಸಬೇಕೆಂದು ವಿವೇಕಾನಂದರ ಸೂಚನೆಯಂತೆ ಅತ್ತ ಪ್ರಯಾಣ ಬೆಳೆಸಿದರು. ಆದರೂ ಬೇಲೂರು ಮಠದ ಸಂಪರ್ಕದಲ್ಲಿರುತ್ತಾ, ಮಠದ ಕಟ್ಟಡಗಳ ನಿರ್ಮಾಣ, ನವೀಕರಣ, ಗಂಗಾನದಿಗೊಂದು ಸ್ನಾನಘಟ್ಟ, ಪರಮಹಂಸರ ದೇವಾಲಯದ ನಿರ್ಮಾಣ, ಮುಂದುಮುಂದಕ್ಕೆ ವಿವೇಕಾನಂದರ ದೇವಾಲಯದ ನಿರ್ಮಾಣ ಮುಂತಾದ ಮಹತ್ಕಾರ್ಯಗಳ ಹೊಣೆಗಾರಿಕೆಯನ್ನೆಲ್ಲ ತಾವೇ ಹೊತ್ತು, ಕರ್ಮಯೋಗಿಯಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದರು. ಅವರು ಸಂನ್ಯಾಸಾಶ್ರಮವನ್ನು ಹೊಕ್ಕರೂ, ಅವರ ಸಿವಿಲ್ ಇಂಜಿನಿಯರಿಂಗ್ ಪದವಿಯ ವಾಸ್ತುಶಿಲ್ಪವಿದ್ಯೆ ಸಾರ್ಥಕವಾಗಿ ಬಳಕೆಯಾಯಿತೆಂಬುದು ಒಂದು ಯೋಗಾಯೋಗದ ವಿಚಾರವೇ ಸರಿ. ಮಠಗಳ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅವರು ವಾರಾಣಸಿ, ಹರಿದ್ವಾರಗಳಲ್ಲೂ ತಮ್ಮ ಶಕ್ತಿಕೌಶಲಗಳನ್ನು ವಿನಿಯೋಗಿಸಿದರು.

**ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ:** 'ಮೋಕ್ಷಸಾಧನೆಯ ಜೊತೆಗೆ ಜಗತ್ತಿನ ಹಿತವನ್ನೂ ಸಾಧಿಸಬೇಕು' ಎಂಬುದು ಪರಮಹಂಸರ ತತ್ತ್ವೋಪದೇಶದ ಮೂಲಮಂತ್ರವಾಗಿತ್ತು. ಅದಕ್ಕನುಸಾರವಾಗಿಯೇ ವಿಜ್ಞಾನಾನಂದರು ತಮ್ಮ ಜೀವಮಾನಾವಧಿಯ ಕಾರ್ಯಕ್ರಮಗಳನ್ನು ಒಂದು ವೇಳಾಪಟ್ಟಿಯನ್ನೇ ಹಾಕಿಕೊಂಡಿದ್ದರೋ ಎಂಬಂತೆ ಮಾಡಿಮುಗಿಸಿದರು. ಪ್ರಯಾಗದಲ್ಲಿ ಕಳೆದ ತಮ್ಮ ೩೮ ವರ್ಷಗಳಷ್ಟು ದೀರ್ಘಕಾಲದ ತಪೋಮಯ ಜೀವನದಲ್ಲಿ ಬಹುಮುಖವಾದ ಕಾರ್ಯಗಳನ್ನು ಅವರು ಸಾಧಿಸಿದರು. ಬ್ರಹ್ಮವಾದಿನ್ ಕ್ಲಬ್ ಎಂಬ ಆಧ್ಯಾತ್ಮಿಕ ಸಂಸ್ಥೆಯೊಂದರ ಕಟ್ಟಡದಲ್ಲಿ ಆಶ್ರಯ ಪಡೆದುಕೊಂಡು, ಸರಳವೂ ಏಕಾಂತವೂ ಅಧ್ಯಯನಶೀಲವೂ ಆದ ಜೀವನಕ್ಕೆ ತಮ್ಮನ್ನು ಸಮರ್ಪಿಸಿಕೊಂಡು ಋಷಿಯಂತೆ ಬಾಳಿದರು. ಗಂಗಾ–ಯಮುನಾ–ಸರಸ್ವತೀ ಸಂಗಮದಲ್ಲಿ ಅವರಿಗೆ ತ್ರಿವೇಣಿಮಾತೆಯು ಮೂರು ಜಡೆಗಳಿಂದ ಕಂಗೊಳಿಸುವ ಮುದ್ದುಬಾಲೆಯಾಗಿ ದರ್ಶನ ನೀಡಿದಳು.

ತಮ್ಮ ವಿದ್ವತ್ತು ಮತ್ತು ಅಧ್ಯಯನಶೀಲತೆಯ ಫಲವಾಗಿ ವಿಜ್ಞಾನಾನಂದರು ಗಣ್ಯಲೇಖಕರಾಗಿ **ಪರಮಹಂಸಚರಿತ** (ಹಿಂದೀ), **ಜಲ್ ಸರ್ವರಹೇರ್ ಕಾರ್ಖಾನಾ**, **ಸೂರ್ಯಸಿದ್ಧಾಂತ** (ಬಂಗಾಳಿ), **ಬೃಹಜ್ಜಾತಕ**, **ದೇವೀಭಾಗವತ**, **ನಾರದಪಂಚರಾತ್ರ** (ಇಂಗ್ಲಿಷ್) ಮುಂತಾದ ಗ್ರಂಥಗಳನ್ನು ಭಾರತೀಯ ಸಾಹಿತ್ಯಜಗತ್ತಿಗೆ ಸಮರ್ಪಿಸಿದರು. ೧೯೦೮ರಲ್ಲಿ ಪ್ರಯಾಗದಲ್ಲೊಂದು ಸ್ವತಂತ್ರವಾದ ರಾಮಕೃಷ್ಣ ಮಠವನ್ನು ತಮ್ಮ ಸಂಘಟನಸಾಮರ್ಥ್ಯದಿಂದ ನಿರ್ಮಾಣಮಾಡಿ ಮೇಲೆ ತಂದರು. ಅಲ್ಲಿಯೇ ಒಂದು ಹೋಮಿಯೋಪತಿ ಆಸ್ಪತ್ರೆಯನ್ನೂ ಕಟ್ಟಿಸಿದರು. ಆರಂಭದಲ್ಲಿ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲದಿದ್ದುದರಿಂದ ಕಷ್ಟಬಿದ್ದು ದೇಣಿಗೆ ಸಂಗ್ರಹಿಸಬೇಕಾಯಿತು. ಒಬ್ಬ ಮುಸ್ಲಿಂ ಗಾಡಿಹೊಡೆಯುವವನೂ ಆ ಕೆಲಸದಲ್ಲಿ ಸಹಕರಿಸಿದನು.

ಪರಮಹಂಸರು ವಿಜ್ಞಾನಾನಂದರಿಗೆ ಬಾಲ್ಯದಲ್ಲಿಯೇ ಬೋಧಿಸಿದ್ದರಿಂದ ಅವರು ಸ್ತ್ರೀಯರ ವಿಷಯದಲ್ಲಿ ಕಟ್ಟುನಿಟ್ಟಿನಿಂದ ಇರುತ್ತಿದ್ದರು. "ಹರಿಪ್ರಸನ್ನನ ಆಶ್ರಮದೊಳಕ್ಕೆ ಒಂದು ಹೆಣ್ಣುನೊಣವೂ ಪ್ರವೇಶಿಸುವಂತಿರಲಿಲ್ಲ" ಎಂದು ಶಿವಾನಂದರು ಹೇಳಿದ ಮಾತು ಸ್ವಾರಸ್ಯಕರವಾಗಿದೆ. "ಜಗನ್ಮಾತೆಯು ನನಗೆ ತನ್ನ ಮೋಹಿನೀರೂಪವನ್ನು ಎಂದೂ ತೋರಿಸಿಲ್ಲ, ಸಂನ್ಯಾಸಿಗಳಾದವರು ಜಗನ್ಮಾತೆಯ ರೂಪಗಳಾದ ಸ್ತ್ರೀಯರಿಗೆ ದೂರದಿಂದಲೇ ನಮಸ್ಕರಿಸಬೇಕು" ಎಂದು ಅವರು ಹೇಳುತ್ತಿದ್ದರು. ಹಾಗೆ ಕಟ್ಟುನಿಟ್ಟಾಗಿರುತ್ತಲೇ ಅನೇಕ ಸ್ತ್ರೀಯರಿಗೆ ದೀಕ್ಷೆಯಿತ್ತರು, ಅವರ ದುಃಖದುಮ್ಮಾನಗಳನ್ನು ಕರುಣೆಯಿಂದ ಆಲಿಸಿ ಪರಿಹಾರ ಸೂಚಿಸಿದರು.

ಪ್ರಯಾಗದಲ್ಲಿದ್ದ ಕಾಲದಲ್ಲಿಯೇ ವಿಜ್ಞಾನಾನಂದರು ೧೯೩೧ ರಿಂದ ೧೯೩೭ ರ ಅವಧಿಯಲ್ಲಿ ವ್ಯಾಪಕವಾದ ದೇಶಸಂಚಾರ ಮಾಡಿದರು. ಉತ್ತರಭಾರತ ಮತ್ತು ದಕ್ಷಿಣಭಾರತದ ಪ್ರಮುಖ ಕ್ಷೇತ್ರಗಳಲ್ಲೆಲ್ಲ ಅವರು ಸುತ್ತಾಡಿದರು. ಬೆಂಗಳೂರು ಮೈಸೂರುಗಳೂ ಅವರ ಪಾದಸ್ಪರ್ಶದಿಂದ ಪುನೀತವಾದುವು. ಅವರು ಮೈಸೂರಿನಲ್ಲಿ ತಾಯಿ ಚಾಮುಂಡಾಂಬೆಯ ದರ್ಶನವನ್ನು ಪಡೆದುಕೊಂಡು ಧನ್ಯರಾದರು. ಪಾಕಿಸ್ತಾನ, ರಂಗೂನ್, ಶ್ರೀಲಂಕಾ, ಬರ್ಮಾಗಳಲ್ಲೂ ಅವರು ಸಂಚರಿಸಿದರು. ಕೆಲವಡೆ ಅವರು ಜಟಾಜೂಟ ಶಿವನ, ಭಗವಾನ್ ಬುದ್ಧನ, ಕಾಳಿಕಾಮಾತೆಯ, ಪರಮಹಂಸರ ದಿವ್ಯದರ್ಶನಗಳನ್ನು ಪಡೆದುಕೊಂಡು ಚೈತನ್ಯಮಯರಾಗಿಬಿಟ್ಟರು. ಈ ನಡುವೆ ಬೇಲೂರು ಮಠದ ಉಪಾಧ್ಯಕ್ಷ ಪದವಿ ಹಾಗೂ ಅಧ್ಯಕ್ಷ ಪದವಿಗಳಲ್ಲಿ ಕೂಡ ವಿರಾಜಮಾನರಾಗಿ ಮಹಾಸಂಘದ ಏಳಿಗೆಗಾಗಿ ಬಹುವಾಗಿ ಶ್ರಮಿಸಿದರು.

**ವಿಚಿತ್ರಾನಂದ:** ವಿಜ್ಞಾನಾನಂದರು ತಮ್ಮ ವೇಷಭೂಷಣಗಳಿಂದ ವಿಚಿತ್ರಪುರುಷರಾಗಿದ್ದರು. ಅವರೊಂದು ದೊಗಳೆ ಅಂಗಿ